# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್‌ಸಿ. 23/2024**

| | | | | |
|---|---|---|---|---|
| **ಸಾಕ್ಷಿದಾರರ ಹೆಸರು** | ಃ | ಮಂಜುಳ | *ಪ್ರಮಾಣ ಮಾಡಿಸಿದ ದಿನಾಂಕಃ* | |
| **ತಂದೆ/ಗಂಡನ ಹೆಸರು** | ಃ | ಸಿ.ಡಿ ಪ್ರಭಾಕರ್ | **17.07.2025** | |
| **ವಯಸ್ಸು** | ಃ | **60 ವರ್ಷ** | | |
| **ವೃತ್ತಿ** | ಃ | ಗೃಹಿಣಿ | **ಪ್ರಾ.ಸಾ.** ಃ | 02 |
| **ವಾಸಸ್ಥಳ** | ಃ | ಗಂಗಾನಗರ, ಮೈಸೂರು | **ಚಾ.ಸಾ.** ಃ | **02** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ಪ್ರಾಸಾ-*1* ನನಗೆ ಮಗನಾಗಬೇಕು. ನನಗೆ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಗೊತ್ತಿರುವುದಿಲ್ಲ ಮತ್ತು ನಾನು ಈ ಹಿಂದೆ ಎಲ್ಲಿಯೂ ನೋಡಿರುವುದಿಲ್ಲ. ಈಗ್ಗೆ *2-3* ವರ್ಷದ ಹಿಂದೆ ಸಂಜೆ *6-7* ಗಂಟೆ ಸುಮಾರಿಗೆ ನಾನು ಮನೆಯಲ್ಲಿ ಇದ್ದಾಗ ನನ್ನ ಮನೆ ಒಳಗಡೆ ಬಂದು ಹಿಂದಿನಿಂದ ನನಗೆ ಹೊಡೆದಿದ್ದರು ನಾನು ಮೂರ್ಛೆ ಹೋಗಿದ್ದೆ ಆ ನಂತರ ಏನಾಯಿತು ಎಂದು ನನಗೆ ಗೊತ್ತಾಗಲಿಲ್ಲ. ಆ ನಂತರ ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿದ್ದರು. ನಾನು ಆಸ್ಪತ್ರೆಯಲ್ಲಿ ಇದ್ದಾಗ ನನ್ನ ಮಗ ಬಂದಿದ್ದ. ನನ್ನ ಮಗನಿಗೆ ನನಗೆ ಯಾರೋ ಹಿಂದಿನಿಂದ ಬಂದು ಹೊಡೆದಿದ್ದರ ಬಗ್ಗೆ ಹೇಳಿದ್ದೆ ಮತ್ತು ನನ್ನ ಬಂಗಾರದ ಮಾಟೀ ಮತ್ತು ಸರ ಇರುವುದಿಲ್ಲ ಎಂದು ಹೇಳಿದ್ದೆ. ನನ್ನ ಬಂಗಾರದ ಒಡವೆಗಳನ್ನು ಯಾರು ತೆಗೆದುಕೊಂಡು ಹೋಗಿದ್ದರು ಎಂದು ಹೇಳಿರುವುದಿಲ್ಲ. ನಾನು ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿದ್ದೆ. ನಾನು ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ಹೇಳಿಕೆಯನ್ನು ತೋರಿಸಲಾಯಿತು.

ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಹೇಳಿಕೆಯನ್ನು ನಿಪಿ-5 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ನಾನು ಆಸ್ಪತ್ರೆಯಲ್ಲಿ ಐಸಿಯು ದಲ್ಲಿ ಇದ್ದಾಗ ಪೊಲೀಸರು ಬಂದಿದ್ದರು ಆಗ ನಾನು ಹೇಳಿಕೆಯನ್ನು ಕೊಟ್ಟಿದ್ದೆ. ನಾನು ಪೊಲೀಸರ ಮುಂದೆ ಕೊಟ್ಟಂತಹ ಹೇಳಿಕೆಯಲ್ಲಿ ನನ್ನ ಬಂಗಾರದ ಒಡವೆಗಳನ್ನು ಯಾರು ಕಿತ್ತುಕೊಂಡು ಹೋಗಿದ್ದರು, ಯಾರು ನನಗೆ ಹೊಡೆದಿದ್ದರು ಎಂದು ಹೇಳಿರಲಿಲ್ಲ. ನಾನು ಈಗ ನೋಡುತ್ತಿರುವ ಫೋಟೋಗಳಲ್ಲಿ ಇರುವ ಒಡವೆಗಳು ನನ್ನ ಒಡವೆಗಳು ಇರುತ್ತವೆ. ಸಾಕ್ಷಿದಾರರು ನೋಡಿ ಗುರುತಿಸಿದ ಫೋಟೋಗಳು ಈಗಾಗಲೇ ನಿಪಿ-3 ಮತ್ತು 4 ಎಂದು ಗುರುತಿಸಲ್ಪಟ್ಟಿರುತ್ತವೆ. ಪೊಲೀಸರು ನನ್ನನ್ನು ಪುನಃ ವಿಚಾರಣೆ ಮಾಡಿ ಹೇಳಿಕೆ ಮಾಡಿಕೊಂಡಿರುವುದಿಲ್ಲ. ನಿಪಿ-3 ಮತ್ತು 4 ಫೋಟೋಗಳನ್ನು ಪೊಲೀಸ್ ಠಾಣೆಯಲ್ಲಿ ತೆಗೆದಿದ್ದರು. ನಾನು ಈಗ ನೋಡುತ್ತಿರುವ ಫೋಟೋದಲ್ಲಿ ನಾನು ಇರುತ್ತೇನೆ. ಸಾಕ್ಷಿದಾರರು ನೋಡಿ ಗುರುತಿಸಿದಂತಹ ಫೋಟೋವನ್ನು ನಿಪಿ-6 ಎಂದು ಗುರುತಿಸಲಾಯಿತು. ಪೊಲೀಸರು ನನಗೆ ಬಂಗಾರದ ಒಡವೆಗಳನ್ನು ಕೊಟ್ಟಾಗ ತೆಗೆದಂತಹ ಫೋಟೋ ಇರುತ್ತದೆ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

ದಿನಾಂಕ 29.03.2023 ರಂದು ಸಂಜೆ 7.30 ಗಂಟೆ ಸುಮಾರಿಗೆ ನಾನು ಮನೆಯಲ್ಲಿ ಒಬ್ಬಳೇ ಇದ್ದಾಗ ನಮ್ಮ ಲೇ ಔಟ್ ನಲ್ಲಿ ಗಾರೆ ಕೆಲಸ ಮಾಡಿಕೊಂಡಿರುವ ಆರೋಪಿ ಗಂಟಲು ನೋವು ಇದೆ ಬಿಸಿ ನೀರು ಮಾಡಿಕೊಡಿ ಎಂದು ಕೇಳಿದ್ದು ನಾನು ಬಿಸಿ ನೀರು ಕಾಯಿಸಲು ಅಡುಗೆ ಮನೆ ಒಳಗಡೆ

ಹೋಗಿದ್ದು, ಆರೋಪಿತನು ತಂದಿದ್ದ ಚೊಂಬನ್ನು ಮನೆಯ ಬಾಗಿಲ ಬಳಿ ಇಟ್ಟು ಒಳಗಡೆ ಬಂದಿದ್ದು ನಾನು ನೀರನ್ನು ಕಾಯಿಸಲು ಇಟ್ಟು ಹಾಲ್ ಗೆ ಬರಲು ತಿರುಗಿದಾಗ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಬಾಗಿಲ ಬಳಿ ಇಟ್ಟಿದ್ದ ಚೊಂಬನ್ನು ತೆಗೆದುಕೊಂಡು ನನ್ನ ಮುಖಕ್ಕೆ ಜೋರಾಗಿ ಹೊಡೆದು ನಾನು ಕೆಳಕ್ಕೆ ಬಿದ್ದು ಅರಚಿದಾಗ ಟವಲ್ ಅನ್ನು ಆರೋಪಿತನು ಬಾಯಿಗೆ ತುರುಕಿ ನನ್ನ ಸೀರೆಯ ಸೆರಗಿನಿಂದ ಕುತ್ತಿಗೆಯನ್ನು ಬಿಗಿದು ಕಿರುಚಬೇಡ ಎಂದು ಹೆದರಿಸಿ ಕುತ್ತಿಗೆಯಲ್ಲಿ ಇದ್ದ ಸುಮಾರು 10 ಗ್ರಾಂ ತೂಕದ ಚಿನ್ನದ ಸರ, ಕಿವಿಯಲ್ಲಿ ಇದ್ದ ಸುಮಾರು 10 ಗ್ರಾಂ ತೂಕದ ಒಂದು ಜೊತೆ ಓಲೆ, ಮಾಟಿ ಮತ್ತು ಡಾಪ್ಸ್ ಅನ್ನು ಬಿಚ್ಚಿ ಕೊಂಡಿದ್ದ ನನಗೆ ಸುಸ್ತಾಗಿ ಪ್ರಜ್ಞೆ ತಪ್ಪಿ ಅಡಿಗೆ ಮನೆಯಲ್ಲಿಯೇ ಬಿದ್ದಿದ್ದೆ ಕೆಲವು ನಿಮಿಷಗಳ ನಂತರ ಎಚ್ಚರವಾದಾಗ ಬಾಯಿಂದ ರಕ್ತ ಸುರಿಯುತ್ತಿತ್ತು. ಪಕ್ಕದ ಮನೆಯವರಿಗೆ ಫೋನ್ ಮಾಡಿ ತಿಳಿಸಿದ್ದೆ ಪಕ್ಕದ ಮನೆ ಅನಿತಾ ರವರ ಮನೆಗೆ ಬಂದು ಕರುಣಾಕರ ನಾಗರಾಜೇಗೌಡ ಆಸ್ಪತ್ರೆಗೆ ನನ್ನನ್ನು ದಾಖಲು ಮಾಡಿದ್ದರು ಎಂದರೆ ಸರಿಯಲ್ಲ. ನಾನು ಈಗ ಓದಿ ಹೇಳಿದ ನಿಪಿ–5 ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ದಿನಾಂಕ 16.07.2023 ರಂದು ನನ್ನನ್ನು ಪೊಲೀಸ್ ಠಾಣೆಗೆ ಕರೆಸಿದ್ದು ಆ ವೇಳೆಯಲ್ಲಿ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನು ನನ್ನಿಂದ ಕಿತ್ತುಕೊಂಡು ಹೋಗಿದ್ದ ಒಡವೆಗಳನ್ನು ನನಗೆ ತೋರಿಸಿದ್ದು ನಾನು ಆ ಒಡವೆಗಳನ್ನು ಗುರುತಿಸಿದ್ದೆ ಆ ಬಗ್ಗೆ ಪೊಲೀಸರು ನನ್ನ ಹೇಳಿಕೆಯನ್ನು ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ನನಗೆ ಈಗ ಓದಿ ಹೇಳಿದ ನಿಪಿ–7 ರಂತೆ ಪೊಲೀಸರ ಮುಂದೆ ಒಡವೆಗಳನ್ನು ನೋಡಿ ಗುರುತಿಸಿದ ಬಗ್ಗೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನನ್ನ ಒಡವೆಗಳನ್ನು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನು ಗಿರವಿ ಇಟ್ಟಿದ್ದನ್ನು ಅಮಾನತ್ತು ಪಡಿಸಿಕೊಂಡಿದ್ದರ ಬಗ್ಗೆ ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನೇ ನನಗೆ ಎಂ.ಒ–1 ರಿಂದ ಹಲ್ಲೆ ಮಾಡಿ ನನ್ನ ಒಡವೆಗಳನ್ನು ಕಿತ್ತುಕೊಂಡು ಹೋಗಿದ್ದರೂ ಸಹ ಆತ ನಮ್ಮ ಲೇಔಟ್ ನಲ್ಲಿ ಗಾರೆ ಕೆಲಸ ಮಾಡಿಕೊಂಡಿರುವುದರಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈಗ ನೋಡುತ್ತಿರುವ ನಿಪಿ–6 ನ್ಯಾಯಾಲಯದ ಆದೇಶದಂತೆ ನನ್ನ ಒಡವೆಗಳನ್ನು ಬಿಡಿಸಿಕೊಳ್ಳುವ ಕಾಲಕ್ಕೆ ತೆಗೆದಂತಹ ಫೋಟೋ ಇರುತ್ತದೆ ಎಂದರೆ ಸರಿ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರವರಿಂದಃ-**

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆಃ- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು